ದಿನಾಂಕ: 17.11.2021 ರಂದು ಬೆಳಗ್ಗೆ 11.00 ಗಂಟೆಗೆ ಕಾಮಾಕ್ಷಿಪಾಳ್ಯ ವಾರ್ಡ್ ನಂ. 101 ರಲ್ಲಿ ಶ್ರೀ ಎ.ಎಸ್. ರಮೇಶ್, ನೋಡಲ್ ಅಧಿಕಾರಿ ರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡುವಳಿಗಳ ವಿವರ:-

**ಹಾಜರಿದ್ದ ಪಾಲಿಕೆಯ ಅಧಿಕಾರಿಗಳು ಹಾಗೂ ವಾರ್ಡ್ ಕಮಿಟಿ ಸದಸ್ಯರು:-**

1. ಶ್ರೀ ಎ.ಎಸ್. ರಮೇಶ್, ನೋಡಲ್ ಅಧಿಕಾರಿಗಳು ಹಾಗೂ ಸದಸ್ಯರು
2. ಶ್ರೀ ಯೋಗೇಶ್.ಕೆ.ಪಿ. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು [ರಾಜಾಜಿನಗರ]
3. ಶ್ರೀ ಪೂಜಾರಪ್ಪ, ಸಹಾಯಕ ಅಭಿಯಂತರರು, ವಾರ್ಡ್ ನಂ. 101 ಕಾಮಾಕ್ಷಿಪಾಳ್ಯ
4. ಶ್ರೀ ಬಿ.ಕೆ. ಶಂಕರ್ ರಾಜ್, ಸಹಾಯಕ ಅಭಿಯಂತರರು, ಬೆಸ್ಕಾಂ
5. ಶ್ರೀ ನಾಗರಾಜ.ಕೆ.ಬಿ. ಸಹಾಯಕ ಅಭಿಯಂತರರು ಬಿ.ಡಬ್ಲ್ಯೂ.ಎಸ್.ಎಸ್.ಬಿ.
6. ಶ್ರೀಮತಿ ಡಾ: ಶೋಭಾ.ಆರ್.ಆರೋಗ್ಯ ವೈದ್ಯಾಧಿಕಾರಿ, ಕಾಮಾಕ್ಷಿಪಾಳ್ಯ
7. ಶ್ರೀ ಎಂ. ರವೀಂದ್ರನಾಥ್, ಎಸ್.ಬಿ.ಐ. ಅಧಿಕಾರಿ, ಬೆಂಗಳೂರು
8. ಶ್ರೀ ಸುಬ್ರಮಣಿ
9. ಶ್ರೀ ಸಿದ್ದರಾಜು, ಸಹಾಯಕ ಅಭಿಯಂತರರು [ವಿದ್ಯುತ್]
10. ಶ್ರೀ ಗಂಗಣ್ಣ.ಎಲ್.ಸಿ.
11. ಶ್ರೀ ಎಸ್.ಎನ್. ಚಂದ್ರರಾಜು

ದಿನಾಂಕ: 12.10.2021 ರಂದು ನಡೆದ ಸಭೆಯಲ್ಲಿ ಹಲವಾರು ವಿಷಯಗಳನ್ನು ಚರ್ಚಿಸಿ, ಅದಕ್ಕೆ ಸಂಬಂಧಪಟ್ಟ ವಿಷಯಗಳಿಗೆ ಪರಿಹಾರ ತೆಗೆದುಕೊಳ್ಳಲಾಗಿರುತ್ತದೆ. ಹಾಗು ದಿನಾಂಕ: 17.11.2021ರಂದು ಬೆಳಗ್ಗೆ 11.00 ಗಂಟೆಗೆ ವಾರ್ಡ್ ನಂ. 101 ಕಾಮಾಕ್ಷಿಪಾಳ್ಯ **ಎಸ್.ಬಿ.ಐ. ಆಫೀಸರ್ಸ್ ಸಮುಧಾಯ ಭವನ, ಎಸ್.ಬಿ.ಐ. ಕಾಲೋನಿ, ಬಸವೇಶ್ವರನಗರ, ಕಾಮಾಕ್ಷಿಪಾಳ್ಯ,** ಇಲ್ಲಿ ಪಾಲಿಕೆ ಅಧಿಕಾರಿಗಳೊಂದಿಗೆ ಸಭೆಯನ್ನು ಕೈಗೊಂಡು ಈ ಕೆಳಗಿನ ವಿಷಯಗಳನ್ನು ಚರ್ಚಿಸಲಾಯಿತು.

1. ವಾರ್ಡ್ ನಂ. 101ರ ಸದಸ್ಯರು ಎಸ್.ಬಿ.ಐ. ಕಾಲೋನಿಯ ಟ್ರಾನ್ಸ್ ಫಾರ್ಮರ್ ಹೊಸದಾಗಿ ಅಳವಡಿಸುವ ಸಮಯದಲ್ಲಿ ರಸ್ತೆ ಕತ್ತರಿಸಿರುವ ಜಾಗವನ್ನು ಸರಿಯಾಗಿ ತುಂಬದೆ ಇರುವುದರಿಂದ ವಿಷ ಜಂತುಗಳು ಓಡಾಡಿ ಜನ ಸಾಮಾನ್ಯರಿಗೆ ಮತ್ತು ಅಕ್ಕಪಕ್ಕದ ಮನೆಯವರಿಗೆ ತೊಂದರೆಯಾಗುತ್ತಿದೆ ಎಂದು ಸಭೆಯಲ್ಲಿ ಚರ್ಚಿಸಿದ ಪ್ರಯುಕ್ತ ಸದರಿ ಜಾಗಕ್ಕೆ ಕಲ್ಲು ಮಿಶ್ರಿತ ಮಿಶ್ರಣವನ್ನು ಕತ್ತರಿಸಿದ ಭಾಗಕ್ಕೆ ತುಂಬಿ, ಸಾರ್ವಜನಿಕರಿಗೆ ಹಾನಿಯಾಗುವುದನ್ನು ತಪ್ಪಿಸಿರುತ್ತದೆ.

2. ವಾರ್ಡ್ ನಂ. 101ರ ಸ್ವತ್ತಿನ ಸಂಖ್ಯೆ: 33, 34, ಕ್ಕೆ ವಿದ್ಯುತ್ ಸಂಪರ್ಕ ಸರಿಯಾಗಿ ಅಳವಡಿಸದೆ ಇರುವುದರಿಂದ ಸಂಪರ್ಕದಲ್ಲಿ ಆಗಿಂದಾಗೆ ಕುಂಠಿತವಾಗುವುದನ್ನ ಸರಿಮಾಡಿಕೊಡಿ ಎಂದು ಸಾರ್ವಜನಿಕರು ಮನವಿ ಮಾಡಿರು ಮೇರೆಗೆ ಬೆಸ್ಕಾಂ ಅಧಿಕಾರಿಗಳಿಗೆ ತುರ್ತಾಗಿ ಕೆಲಸ ನಿರ್ವಹಿಸುವಂತೆ ಸೂಚಿಸಲಾಗಿರುತ್ತದೆ.

3. ಆರೋಗ್ಯ ಪರಿವೀಕ್ಷಕರು ಸಭೆಯಲ್ಲಿ ಇಲ್ಲಿಯವರೆಗೆ ಯಾವುದೇ ಕರೋನಾ ಔಷಧಿ ಸರಿಯಾದ ಪ್ರಮಾಣದಲ್ಲಿ ಸರಬರಾಜು ಆಗುತ್ತಿದ್ದು, ಸಾರ್ವಜನಿಕರಿಗೆ ವಿತರಣೆ ಮಾಡಲಾಗುತ್ತಿಗೆ ಎಂದು ಸಭೆಗೆ ತಿಳಿಸಿರುತ್ತಾರೆ.

ಪು.ತಿ.ನೋ.

Scanned by CamScanner

4. ಬಿ.ಡಬ್ಲ್ಯೂ.ಎಸ್.ಎಸ್.ಬಿ. ಎಇಇ ಆಗಿದ್ದ ಸಂದರ್ಭದಲ್ಲಿ ಇಲ್ಲಿಯವರೆಗೆ ಬೋರ್ ವೆಲ್ ಕೊರೆದು ಪಂಪ್ ಸೆಟ್ ಅಳವಡಿಸಿರುವ ಕೊಳವೆ ಬಾವಿಗಳ ನಿರ್ವಹಣೆಯನ್ನು ತಮ್ಮ ಸುಪರ್ಧಿಗೆ ತೆಗೆದುಕೊಳ್ಳಲು ಸಭೆಯಲ್ಲಿ ತಿಳಿಸಿದಾಗ ನಾವು ಈ ತರಹದ ಕೊಳವೆ ಬಾವಿಗಳನ್ನು ಹಸ್ತಾಂತರ ಮಾಡಿಕೊಳ್ಳುವುದಿಲ್ಲ. ನಮ್ಮ ಹಣದ ಕೊರತೆ ಇರುವುದರಿಂದ ನಿರ್ವಹಣೆ ವೆಚ್ಚವನ್ನು ಭರಿಸಲು ತೊಂದರೆಯಾಗಿರುತ್ತದೆ. ಆದರೆ ಹೊಸದಾಗಿ ಕೊರೆಯುವ ಕೊಳವೆ ಬಾವಿಗಳ ಕೊರೆಯುವ ವೆಚ್ಚವನ್ನು ನಮ್ಮ ಇಲಾಖೆಗೆ ಹಸ್ತಾಂತರಿಸಿದರೆ ನಿರ್ವಹಣಾ ವೆಚ್ಚವನ್ನು ಅಂದಾಜು ಪಟ್ಟಿಯಲ್ಲಿ ಅಳವಡಿಸಿಕೊಂಡು ನಿರ್ವಹಣೆ ಮಾಡಲಾಗುತ್ತದೆ. ಆದುದರಿಂದ ಹಳೆಯ ಕೊಳವೆ ಬಾವಿಗಳನ್ನು ತಮ್ಮಿಂದಲೇ ನಿರ್ವಹಿಸಲು ತಿಳಿಸಿರುತ್ತಾರೆ.

ಸದಸ್ಯ ಕಾರ್ಯದರ್ಶಿಗಳು ಸಭೆಯಲ್ಲಿ ಹಾಜರಿದ್ದ ಮಾನ್ಯ ಅಧ್ಯಕ್ಷರಿಗೆ ವಾರ್ಡ್ ಸಮಿತಿ ಸದಸ್ಯರುಗಳಿಗೆ ಮತ್ತು ವಿವಿಧ ಇಲಾಖೆಯ ಅಧಿಕಾರಿಗಳಿಗೆ ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

17/11/2021

ಸದಸ್ಯ ಕಾರ್ಯದರ್ಶಿ<br>ವಾರ್ಡ್ ಸಮಿತಿ

ನೋಡಲ್ ಅಧಿಕಾರಿಗಳು<br>ವಾರ್ಡ್ ನಂ. 101

Scanned by CamScanner